ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ,
ಉಡುಪಿ.

ಸಿ.ಸಿಃ 1034/2024
ಚಾ. ಸಾ 08
ಪ್ರಾ.ಸಾ 06

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ ಟಿ ಎಸ್ ರಾವ್ |
| ತಂದೆಯ ಹೆಸರು | : | ಟಿ ವೆಂಕಟ ರಾವ್ |
| ವಯಸ್ಸು | : | 60 |
| ಉದ್ಯೋಗ | : | ಜನರಲ್ ಸರ್ಜನ್ |
| ವಾಸಸ್ಥಳ | : | ಉಡುಪಿ |

ದಿನಾಂಕಃ 29-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಅಭಿಯೋಜಕರಿಂದಃ**

ನಾನು ಕಳೆದ 25 ವರ್ಷಗಳಿಂದ ಉಡುಪಿ ಹೈ ಟೆಕ್ ಮೆಡಿಕೇರ್ ಆಸ್ಪತ್ರೆ ಯಲ್ಲಿ ಜನರಲ್ ಸರ್ಜನ್ ಆಗಿ ಸೇವೆಯನ್ನು ಸಲ್ಲಿಸುತ್ತಾ ಬರುತಿದ್ದೇನೆ . ದಿ. 10-03-2018 ರಂದು ರಾತ್ರಿ 9.45 ರ ಸಮಯದಲ್ಲಿ ಚಾಸಾ-1 ರವರು ಅವರ ನೆರೆಹೊರೆಯವರು ಹಲ್ಲೆ ಮಾಡಿರುತ್ತಾರೆ ಎನ್ನುವ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿದ್ದರು . ಚಾಸಾ 1 ರವರನ್ನು ಪರೀಕ್ಷೆ ಮಾಡಿದಾಗ ಅವರ ತಲೆಯಲ್ಲಿ ಹರಿದ ಗಾಯವು ಕಂಡು ಬಂದಿತ್ತು ಅದಕ್ಕೆ ಚಿಕಿತ್ಸೆಯನ್ನು ನೀಡಿರುತ್ತೇನೆ. ಚಾಸಾ 1 ರವರಿಗೆ ಆಗಿದ್ದ ಗಾಯವು ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ತಾಜಾ ಸ್ವರೂಪದ ಗಾಯವು ಆಗಿತ್ತು. ಚಾಸಾ 1 ರವರಿಗೆ ನೀಡಿದ ಚಿಕಿತ್ಸೆ ಹಾಗೂ ಅವರಿಗೆ ಆಗಿದ್ದ ಗಾಯದ ಬಗ್ಗೆ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯವರು ಗಾಯದ ಪ್ರಮಾಣ ಪತ್ರ ನೋಡಿ ಇದು ನಾನು ನೀಡಿದ ದಾಖಲೆ ಎಂದು ಮತ್ತು ಅದರಲ್ಲಿರುವ ಸಹಿ ನನ್ನ ಸಹಿ ಎಂದು ಗುರುತಿಸಿದ್ದು , ಗಾಯದ ಪ್ರಮಾಣ ಪತ್ರವನ್ನು ನಿಪಿ-3 ಎಂದು, ಸಾಕ್ಷಿಯವರ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು .

**ಪಾಟೀ ಸವಾಲುಃ ಶ್ರೀ ಬಿ.ಆರ್.ಡಿ ವಕೀಲರಿಂದಃ**

ವಿದ್ಯುತ್ ಚಕ್ತಿಯ ಕೆಲಸವನ್ನು ಮಾಡುವಂತಹ ವ್ಯಕ್ತಿಗಳು ಎತ್ತರದಲ್ಲಿ ಕೆಲಸ ಮಾಡುತಿದ್ದು ಆಕಸ್ಮಿಕವಾಗಿ ಬಿದ್ದಲ್ಲಿ ನಿಪಿ-3 ರಲ್ಲಿ ಕಾಣಿಸುವಂತಹ ಗಾಯಗಳು

ಆಗುವಂತಹ ಸಂಭವ ಇದೆ ಎಂದರೆ ಆಗಬಹುದು . ಚಾಸಾ-1 ರವರು ನಿಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದ ವೇಳೆ ಮದ್ಯಪಾನವನ್ನು ಸೇವನೆ ಮಾಡಿದ್ದರೇ ಎಂದರೆ ಇಲ್ಲ . ಚಾಸಾ 1 ರವರು ಯಾರು ಹಲ್ಲೆ ಮಾಡಿದ್ದರು ಎಂದು ನಿಮಗೆ ತಿಳಿಸಿದ್ದಾರೆಯೇ ಎಂದರೆ ಇಲ್ಲ .

**ಮರು ವಿಚಾರಣೆಃ** ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.